4. Notification No. FTD 19 TMT 89 dated 19-4-1989.
Karnataka Motor Vehicles Taxation (II nd Amendment) Rules 1989.
As required under section 16 (2) of the Karnataka Motor Vehicles Taxation Act 1957.

5. Account and Audit Report of Karnataka State Road Transpot Corporation for the year 1986-87.
as required Under Section 33 (4) of RTC Act 1950.

6. 27th Annual Administration Report of KSRTC Bangalore-560027 for the year 1987-88.
as required Under Section 35 (2) of the Road Transport Corporation Act 1950,

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಕಾಗದ ಪತ್ರಗಳ ಮಂಡನೆ ಆದ ನಂತರ ಶೂನ್ಯ ಕಾಲದಲ್ಲಿ ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಅವಕಾಶ ಇದೆ. ಸ್ವಾತಂತ್ರ್ಯ ಬಂದ ನಂತರ ಮೊದಲ ಬಾರಿಗೆ ಈ ದೇಶದ ಅನೇಕ ಬೇರೆ ಬೇರೆ ರಾಜ್ಯಗಳಲ್ಲಿ ರೈತರ ಸಾಲವನ್ನು ಮನ್ನಾ ಮಾಡುವ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಕೂಡಾ ಕಾಂಗ್ರೆಸ್ ಮುಖಂಡರು ಚುನಾವಣಾ ಸಮಯದಲ್ಲಿ ಆಶ್ವಾಸನೆಯನ್ನು ಕೊಟ್ಟು ಅಧಿಕಾರಕ್ಕೆ ಬಂದಿದ್ದಾರೆ.

ಅಧ್ಯಕ್ಷರು.—ನಾನು ಈಗಾಗಲೇ ತಿಳಿಸಿದ್ದೇನೆ. ಕಾಗದಪತ್ರಗಳನ್ನು ಸಭೆಯ ಮುಂದೆ ಇಟ್ಟ ಬಳಿಕ ತಾವು ಏನು ಎರಡು-ಮೂರು ಪ್ರಸ್ತಾವಗಳನ್ನು ಕಳುಹಿಸಿದ್ದೀರಿ ಅವುಗಳ ಬಗ್ಗೆ ನಾನು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಆಗ ನಿಮ್ಮ ಅಭಿಪ್ರಾಯಗಳನ್ನು ನಾನು ಕೇಳುತ್ತೇನೆ. ಈಗ ವಿತ್ತೀಯ ಕಲಾಪಗಳಿದ್ದು ವಾಣಿಜ್ಯ ಹಣಕಾಸಿನ ಸಚಿವರು ಅನುಪೂರಕ ಅಂದಾಜುಗಳನ್ನು ಒಪ್ಪಿಸುವರು.

FINANCIAL BUSINESS
SUPPLEMENTARY ESTIMATES

SRI M. RAJASHEKARA MURTHY (Minister for Finance).—I beg to persent.

"The Supplementray Estimates for the year 1989-90 (First Instalmen) as required under Article 205 (i) of the Consti-Constitution of India."

Mr. Speaker.—Supplementary Estimates for the year 89-90 (First instalment) presented.

ನಿಲುವಳಿ ಸೂಚನೆಗಳು

೧ ರಾಜ್ಯದಲ್ಲಿ ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯ ಮೂಲಕ ರೈತರ ಸಾಲ ಮನ್ನಾ ಮಾಡುವ ಒಂದು ಪ್ರಸ್ತಾಪವನ್ನು ತಮಗೆ ಕಳುಹಿಸಿ ಕೊಟ್ಟಿದ್ದೇನೆ. ಈ ಮನೆಯ ಎಲ್ಲಾ ಸದಸ್ಯರಿಗೂ ರೈತರ ಬಗ್ಗೆ ಕಳಕಳಿಯಿದೆ. ತಮಗೆ ಗೊತ್ತಿರುವ ಹಾಗೆ ಮೊದಲನೆಯ ಸಾರಿ ಹೆಚ್ಚಿನ ಬಹುಮತದಿಂದ ಕಾಂಗ್ರೆಸ್ ಪಕ್ಷ ಆರಿಸಿ ಅಧಿಕಾರಕ್ಕೆ ಬಂದಿದೆ,

ಅಧ್ಯಕ್ಷರು.— ಮಾನ್ಯ ಸದಸ್ಯರಾದ ಯಡಿಯೂರಪ್ಪನವರೇ ನನ್ನ ಮುಂದೆ ಎರಡು ಮೂರು ನಿಲುವಳಿ ಸೂಚನೆಗಳಿವೆ. ಒಂದನ್ನು ವಿರೋಧ ಪಕ್ಷದ ನಾಯಕರಾದ ಮಾನ್ಯ ಚಂದ್ರೇಗೌಡರು

ನಿನ್ನೆ ಸಾಯಂಕಾಲ ಕಳುಹಿಸಿ ಕೊಟ್ಟಿದ್ದಾರೆ. ಇನ್ನೊಂದು ನಿಲುವಳಿ ಸೂಚನೆಯನ್ನು ಮಾನ್ಯ ಸದಸ್ಯರಾದ ಭೈರೇಗೌಡರು ನಿನ್ನೆ ಸಾಯಂಕಾಲ ಕಳುಹಿಸಿ ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ತಾವು ನಿಲುವಳಿ ಸೂಚನೆಯನ್ನು ಇವತ್ತು ಬೆಳಗ್ಗೆ ನನಗೆ ಕಳುಹಿಸಿ ಕೊಟ್ಟಿದ್ದೀರಿ. ಮೂರು ನಿಲುವಳಿ ಸೂಚನೆಗಳ ಬಗ್ಗೆ ನಾವೀಗ ತೀರ್ಮಾನ ಮಾಡಬೇಕಾಗಿದೆ. ಇದಕ್ಕೆ ಮೊದಲು ಗಮನ ಸೆಳೆಯುವ ಸೂಚನೆಯನ್ನು ಮುಂಗಿಸಿ ಅವುಗಳ ಬಗ್ಗೆ ನಂತರ ನಾವು ನಮ್ಮ ಗಮನ ಹರಿಸಬಹುದು.

೨) ಜಿಲ್ಲಾ ವ್ಯಾಪ್ತಿಯೊಳಗೆ ಬರತಕ್ಕ ೩ ಸಾವಿರ ಶಿಕ್ಷಕರ ನೇಮಕಾತಿ ರದ್ದು ಮಾಡತಕ್ಕ ಸರ್ಕಾರಿ ನಿರ್ಣಯದ ಬಗ್ಗೆ

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).— ಮಾನ್ಯ ಅಧ್ಯಕ್ಷರೆ, ನಿಯಮಾವಳಿಯಂತೆ ನಿಲುವಳಿ ಸೂಚನೆ ಉಳಿದೆಲ್ಲ ಸೂಚನೆಗಳಿಗಿಂತ ಅಧ್ಯತೆ ಪಡೆಯುತ್ತದೆ. ಕಾರಣವೇನೆಂದರೆ ನಿಲುವಳಿ ಸೂಚನೆಯನ್ನು ತೆಗದುಕೊಳ್ಳಬೇಕೇ ಬೇಡವೇ ಎನ್ನುವುದು ಮೊದಲನೆಯ ಪ್ರಶ್ನೆ. ಆ ಪ್ರಶ್ನೆಯನ್ನು ತಾವು ನಿರ್ಣಯ ಮಾಡಿದ ಮೇಲೆ ಸದನದ ಉಳಿದ ವಿಚಾರಗಳನ್ನು ಕೈಗೆತ್ತಿಕೊಳ್ಳಬಹುದು. ನಾನು ಮೊದಲು ಏನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ ಅದರ ಆಡ್ಮಿಸಬಲಿಟಿ ಬಗ್ಗೆ ತಾವು ಕೇಳಬಹುದು. ನಾನು ಕಳುಹಿಸಿರತಕ್ಕ ನಿಲುವಳಿ ಸೂಚನೆ, ಈ ಸರ್ಕಾರ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮೊದಲ ಮಂತ್ರಿ ಮಂಡಲ ಸಭೆಯಲ್ಲಿ ಸುಮಾರು ೩ ಸಾವಿರ ಜನ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯೊಳಗೆ ನೇಮಕ ಮಾಡಿದ ಶಿಕ್ಷಕರ ಬಗ್ಗೆ ಒಂದು ನಿರ್ಣಯವನ್ನು ಕೈಗೊಂಡಿದ್ದಾರೆ. ಅದು ಪತ್ರಿಕೆಗಳಲ್ಲಿ ಬಂದಿದೆ. ನಾನು ಇನ್ನೇ ಅಧಿವೇಶನವನ್ನು ನಿಲುವಳಿ ಸೂಚನೆಯಿಂದ ಪ್ರಾರಂಭ ಮಾಡಬೇಕೆನ್ನುವ ಇಚ್ಛೆ ಇರಲಿಲ್ಲ. ಅದು ಸದನದ ದೃಷ್ಟಿಯಲ್ಲಿ ಸರಿ ಅಂದುಕೊಂಡಿಲ್ಲ. ಈ ಒಂದು ಅಸ್ತ್ರವನ್ನು ವಿಶೇಷವಾದ ಸಂದರ್ಭದಲ್ಲಿ ಬಳಸಬೇಕು ಎನ್ನುವ ಸಂಪ್ರದಾಯಕ್ಕೆ ಬದ್ಧನಾಗಿರುವವನು ನಾನು ಆದರೆ ದುರದೃಷ್ಟವಶಾತ್ ಆಳುವ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಮಂತ್ರಿಮಂಡಲದ ಮೊದಲ ತೀರ್ಮಾನ ನಮ್ಮ ರಾಜ್ಯದಲ್ಲಿ ಒಂದು ದೊಡ್ಡ ಗೊಂದಲವನ್ನು ಎಬ್ಬಿಸಿದೆ. ಮುಖ್ಯವಾಗಿ ಸುಮಾರು ೩ ಸಾವಿರ ಉಪಾಧ್ಯಾಯರನ್ನು ಜಿಲ್ಲಾ ಪರಿಷತ್‌ನವರು ನೇಮಕ ಮಾಡುವುದರ ಮೂಲಕ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತಹ ಒಂದು ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿದ್ದರು. ಆ ಪ್ರಯತ್ನಕ್ಕೆ ಕೊಡಲಿ ಏಟನ್ನು ಈ ನಿರ್ಣಯ ಅಥವ ತೀರ್ಮಾನ ಕೊಟ್ಟಿದೆ. ಮೊದಲನೆಯದಾಗಿ ನಾವು ಡಿಸೆಂಬರ್ ಕೊನೆಯ ಹಂತದಲ್ಲಿದ್ದೇವೆ. ಇನ್ನು ಎರಡು ತಿಂಗಳುಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶಾಲೆಗಳಲ್ಲಿ ಅಭ್ಯಾಸ ಮಾಡತಕ್ಕ ಮಕ್ಕಳು ತಮ್ಮ ಪರಿಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳುವ ಹಂತದಲ್ಲಿ ಇದ್ದ ಉಪಾಧ್ಯಾಯರನ್ನು ಕಳೆದುಕೊಂಡು ಇಡೀ ಗ್ರಾಮಾಂತರ ಪ್ರದೇಶಗಳ ಶಾಲೆಗಳಲ್ಲಿರತಕ್ಕ ಮಕ್ಕಳನ್ನು ಮತ್ತು ಅವರ ತಂದೆ ತಾಯಿಗಳನ್ನು ಅತೀವವಾದ ಗೊಂದಲದಲ್ಲಿ ನಾವು ಕೆಡವಿದ್ದೇವೆ, ಎರಡನೆಯದಾಗಿ ನಾನು ಈ ಸರ್ಕಾರ ಈ ರೀತಿ ಮಾಡುತ್ತದೆಂದು ಅಂದುಕೊಂಡಿರಲಿಲ್ಲ. ಇದು ಜನರ ಪರವಾಗಿ, ಜನರ ಸಲುವಾಗಿ ಒಳ್ಳೆಯ ಕೆಲಸ ಮಾಡುತ್ತದೆಂದೂ ಜನರ ಹಿತದಿಂದ ಒಳ್ಳೆಯ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ ಎನ್ನುವ ನನ್ನ ಅನಿಸಿಕೆ ಇದರಿಂದಾಗಿ ನುಚ್ಚು ನೂರಾಗಿದೆ. ಇದು ಬಡ ಶಿಕ್ಷಕರ ಹೊಟ್ಟೆಯ ಮೇಲೆ ಹೊಡೆಯತಕ್ಕ ಮೊದಲನೆಯ ತೀರ್ಮಾನ. ಎರಡನೆಯದಾಗಿ ಜಿಲ್ಲಾಪರಿಷತ್ತಿನ ಸ್ವಾಯತ್ತತೆ ಬಗ್ಗೆ ಏನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ ಅದು ಒರುವುದಕ್ಕೆ ಮುಂಚೆ ಸ್ವಾಯತ್ತತೆಗೆ ವಿಕೇಂದ್ರೀಕರಣ ವ್ಯವಸ್ಥೆಗೆ ಗಧಾಪ್ರಹಾರ ಮಾಡಿ ಅವರ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಆದರ ಪರಿಣಾಮ ಇಡೀ ರಾಜ್ಯದ ಸುಮಾರು ಆರೇಳು ಜಿಲ್ಲೆಗಳಲ್ಲಿ ನೂರಾರು ಶಾಲೆಗಳು ಸಾವಿರಾರು ಮಕ್ಕಳು ೩ ಸಾವಿರ ಜನ ಉಪಾಧ್ಯಾಯರು ನಿರುದ್ಯೋಗಿಗಳಾಗುವ ಸ್ಥಿತಿಯಿದೆ. ಆ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಇದು ನಿನ್ನೆ ನಿಯಮಾವಳಿ ಒಳಗೆ ಬರುತ್ತದೆ. ಇದು ಮುಖ್ಯವಾಗಿರತಕ್ಕ ವಿಷಯ. ಈ ನಿಲುವಳಿ ಸೂಚನೆ ಹಕ್ಕಿನ ವ್ಯಾಪ್ತಿಯೊಳಗೆ ಬರುತ್ತದೆನ್ನುವ ರೀತಿಯಲ್ಲಿ ನಾನು ತಪಂಗೆ ಮನವರಿಕೆ ಮಾಡುತ್ತೇನೆ, ಮುಂಖ್ಯವಾದಂಥ ಒಂದು ನಿಲುವಳಿ ಸೂಚನೆ ಇತ್ತೀಚೆಗೆ ನಡೆದಂಥ ನಿರ್ದಿಷ್ಟ ವಿಷಯಕ್ಕೆ ಸೀಮಿತವಾಗಿರಬೇಕು. ಈ ವ್ಯಾಪ್ತಿಯೊಳಗೆ ಅದು ಬರುತ್ತದೆ.

> **''ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳ ಒಂದು ನಿರ್ದಿಷ್ಟ ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ಸದನದ ಕಾರ್ಯ ಕಾಲಾಪಗಳ ನಿಲುವಳಿ ಬಗ್ಗೆ ಸೂಚನೆಯನ್ನು ತರಬಹುದು''**